ಸಾಹಿತ್ಯ :

ರೂ. 250ರಂತೆ 41 ಜನ

ರೂ. 500ರಂತೆ 12 ಜನ

ಜಾನಪದ ಮತ್ತು ಯಕ್ಷಗಾನ :

ರೂ. 250ರಂತೆ 106 ಜನ

ರೂ. 500ರಂತೆ 06 ಜನ

ಅ) 1987-88ನೇ ಸಾಲಿನಿಂದ

ಇ) ಪರಿಶೀಲಿಸಲಾಗುತ್ತಿದೆ.

ಈ) 1990-91ನೇ ಸಾಲಿನವರೆಗೆ :

1. ಕ್ರೀಡಾಪಟುಗಳಿಂದ195 ಅರ್ಜಿಗಳು

2. ಸಾಹಿತಿಗಳು,ಜಾನಪದ, ಯಕ್ಷಗಾನ ಮುಂತಾದ ಕಲಾವಿದರುಗಳಿಂದ 3150 ಅರ್ಜಿಗಳು.

ಆನೇಕಲ್ ತಾಲೋಕಿನಲ್ಲಿ ಮಿನಿ ಸ್ಟೇಡಿಯಂ ಸ್ಥಾಪನೆ ಬಗ್ಗೆ

544 - ಶ್ರೀ ಎಂ.ಪಿ. ಕೇಶವಮೂರ್ತಿ (ಆನೇಕಲ್) : ಮಾನ್ಯ ಯುವಜನ ಸೇವಾ ಕ್ರೀಡಾ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆನೇಕಲ್ ತಾಲ್ಲೂಕಿನಲ್ಲಿ ಮಿನಿ ಸ್ಟೇಡಿಯಂ ಸ್ಥಾಪಿಸಲು ಸರ್ಕಾರದವರು ಯೋಚಿಸಿದ್ದಾರೆಯೇ:

ಆ) ಹಾಗಿದ್ದಲ್ಲಿ, ಈ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು)

ಅ) ಪರಿಶೀಲನೆಯಲ್ಲಿದೆ

ಆ) ಉದ್ಭವಿಸುವುದಿಲ್ಲ.

ಕೋಲಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಅಭಿವೃದ್ಧಿ ನಿಗಮವು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ

868 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ): ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ;

ಆ) ಇದಕ್ಕಾಗಿ ವೆಚ್ಚವಾದ ಹಣವೆಷ್ಟು ?

ಇ) ಇದರಿಂದಾಗಿ ಜಿಲ್ಲೆಯ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಅನುಕೂಲವಾಗಿದೆ

ಈ) ನಿಗಮವು ಈ ವರ್ಷ ಯಾವ ಯಾವ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಕೈಗೊಳ್ಳಲು ನಿರ್ಧರಿಸಿದೆ?

ಉ) ಇದಕ್ಕಾಗಿ ಮೀಸಲಾಗಿಟ್ಟಿರುವ ಹಣವೆಷ್ಟು ?